ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 42/2018

(ಫ್ರಾಸಾ-8 ಚಾಸಾ-23)
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 24.03.2026

| | | |
|---|---|---|
| ಸಾಕ್ಷಿದಾರರ ಹೆಸರು | - | ನಾಗಪ್ಪ ಸಿ. |
| ತಂದೆಯ ಹೆಸರು | - | ಚಿನ್ನಪ್ಪ |
| ವಯಸ್ಸು | - | 50 ವರ್ಷ, |
| ಉದ್ಯೋಗ | - | ಪಿಐ, ಬೆಳಂದೂರು ಟ್ರಾಫಿಕ್ |
| ವಾಸ | - | ಬೆಂಗಳೂರು |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ದಿಃ14.02.2015 ರಿಂದ ದಿಃ25.04.2020 ರವರೆಗೆ ವೈಟ್ ಫೀಲ್ಡ್ ಪೋಲಿಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ02.06.2017 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಕಡತದೊಂದಿಗೆ ಚಾಸಾ-21 ಇವರಿಂದ ವಹಿಸಿಕೊಂಡು ಕಡತವನ್ನು ಪರಿಶೀಲಿಸಿರುತ್ತೇನೆ. ಅದೇ ದಿನ ಈ ಪ್ರಕರಣದಲ್ಲಿ ಕಲಂ 304(2) ಐಪಿಸಿ, 3(1)(ಜೆ) ಎಸ್ ಸಿ ಎಸ್ ಟಿ ಕಾಯ್ದೆ, ಕಲಂ 7 ರಿಂದ 9 ಅನೈರ್ಮಲ್ಯ ವೃತ್ತಿನಿರ್ಬಂಧಕ ಕಾಯ್ದೆ, ಕಲಂ 75 ಬಾಲಾಪರಾಧಿ ಕಾಯ್ದೆ ಇವುಗಳನ್ನು ಅಳವಡಿಸಿಕೊಳ್ಳಲು ಈ ನ್ಯಾಯಾಲಯಕ್ಕೆ ಮನವಿಯನ್ನು ಸಲ್ಲಿಸಿ ಅನುಮತಿ ಪಡೆದಿರುತ್ತೇನೆ.

3. ನಂತರ ಅದೇ ದಿನ ವೈದೇಹಿ ಆಸ್ಪತ್ರೆಯ ಶವಗಾರದಲ್ಲಿ ಮೃತ ಪ್ರಥ್ವಿರಾಜ್ ಇವರ ಶವ ಪಂಚನಾಮೆಯನ್ನು ಪಂಚರಾದ ಚಾಸಾ-10 ರಿಂದ 12 ರವರ ಸಮಕ್ಷಮ ಮಧ್ಯಾಹ್ನ 03.00 ಘಂಟೆಯಿಂದ 05.00 ಘಂಟೆಯವರೆಗೆ ಜರುಗಿಸಿರುತ್ತೇನೆ. ಶವದ ಎರಡು ಮೊಣಕೈ, ಎಡಪಕ್ಕೆ, ಎಡಭುಜದ ಮೇಲೆ ತರಚಿದ ಗಾಯಗಳು ಕಂಡುಬಂದಿರುತ್ತವೆ. ಶವ

ಪಂಚನಾಮೆಯ ನಂತರ ಮೃತನ ಶವ ಪರೀಕ್ಷೆ ಮಾಡಲು ವೈದ್ಯರಿಗೆ ಮನವಿ ಸಲ್ಲಿಸಿ ಶವವನ್ನು ಹಸ್ತಾಂತರಿಸಿರುತ್ತೇನೆ. ಸಾಕ್ಷಿದಾರರಾದ ಚಾಸಾ-2 ಮತ್ತು 4 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಸಾಕ್ಷಿ ಶವ ಪಂಚನಾಮೆ ನೋಡಿ ಗುರುತಿಸಿದ್ದು ನಿಪಿ-7 ಎಂದು ಸಾಕ್ಷಿ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು.

4. ದಿಃ 06.06.2017 ರಂದು ಠಾಣಾ ಸಿಬ್ಬಂದಿ ಚಾಸಾ-20 ಇವರನ್ನು ಪಿಎಂ ವರದಿ ತಂದು ಹಾಜರುಪಡಿಸಲು ಸೂಚನೆ ನೀಡಿದ್ದು ಸದರಿಯವರು ಮೃತ ಪ್ರಥ್ವಿರಾಜ್ ಇವರ ನಿಪಿ-4 ಪಿಎಂ ವರದಿಯನ್ನು ಹಾಗೂ ವೈದ್ಯರು ಸಂಗ್ರಹಿಸಿದ್ದ 4 ವಸ್ತುಗಳನ್ನು ತಂದು ಹಾಜರುಪಡಿಸಿದ ಮೇರೆಗೆ ಸದರಿ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 62/2017 ರಲ್ಲಿ ನಮೂದಿಸಿರುತ್ತೇನೆ. ನಿಪಿ-4 ಪಿಎಂ ವರದಿಯಲ್ಲಿ ಸಾಕ್ಷಿ ತಮ್ಮ ಸಹಿ ನೋಡಿ ಗುರುತಿಸಿದ್ದು ನಿಪಿ-4(ಬಿ) ಎಂದು ಗುರುತಿಸಲಾಯಿತು. ಎಸ್ ಸಿ ಎಸ್ ಟಿ ಪ್ರಕರಣವಾದ್ದರಿಂದ ಪ್ರಕರಣದ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಅದೇ ದಿನ ಚಾಸಾ-24 ರವರಿಗೆ ವರ್ಗಾಯಿಸಿರುತ್ತೇನೆ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎನ್ ಐ ಜಿ ವಕೀಲರಿಂದಃ</u>**

5. ಮೃತನ ವಯಸ್ಸಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ನಾನು ಸಂಗ್ರಹಿಸಿಲ್ಲ. ತಾವು ಈ ಪ್ರಕರಣದಲ್ಲಿ ತನಿಖೆ ಮಾಡಲು ಮೇಲಾಧಿಕಾರಿಗಳಿಂದ ಅನುಮತಿ ಪಡೆದಿದ್ದೀರಾ ಎಂದು ಕೇಳಲಾಗಿ ಸಾಕ್ಷಿ ಎಸಿಪಿಯವರಿಂದ ತನಿಖೆ ಮಾಡಲು ಮೌಖಿಕ ಆದೇಶವನ್ನು ಪಡೆದಿದ್ದೆನು ಎಂದು ಹೇಳುತ್ತಾರೆ. ಕಲಂ 7 ರಿಂದ 9 ಅಸ್ಪೃಶ್ಯತಾ ವೃತ್ತಿನಿರ್ಬಂಧಕ ಕಾಯ್ದೆ ಕಲಂ 10 ರ ಅಡಿಯಲ್ಲಿ ಪೋಲಿಸರಿಗೆ ದೂರು ಸ್ವೀಕರಿಸಿ ತನಿಖೆ ಮಾಡಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಕಲಂ 20 ರ ಅಡಿಯಲ್ಲಿ ಸರ್ಕಾರದವರು ಈ ಪ್ರಕರಣದಲ್ಲಿ ತನಿಖೆ ನಡೆಸಲು ನನಗೆ ಅಧಿಕಾರವನ್ನು ನೀಡಿರುವುದಿಲ್ಲ. ನಾನು ಈ ಪ್ರಕರಣದಲ್ಲಿ ಕಾನೂನು ಬಾಹಿರವಾಗಿ ತನಿಖೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿತರ ಪರ ಶ್ರೀ ಎಸ್ ಎನ್ ವಕೀಲರಿಂದಃ**

2 ಮತ್ತು 3 ನೇ ಆರೋಪಿತರು ಸಹ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದವರು ಎಂದರೆ ನನಗೆ ಗೊತ್ತಿಲ್ಲ. (2 ಮತ್ತು 3 ನೇ ಅರೋಪಿತರು 1 ನೇ ಆರೋಪಿತರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ನಿವೇದಿಸಿರುತ್ತಾರೆ).

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು